ಶ್ರೀ ಸಿ. ಬೈರೇಗೌಡ:- ವಿಶ್ವೇಶ್ವರ ಹೆಗಡೆಯವರಿಗೆ ನಮ್ಮ ಮನವಿ ಏನು ಅಂದರೆ ಒಂದು ದಿವಸ ಅವರು ಹಂದಿ ಮಾಂಸದ ರುಚಿಯನ್ನು ನೋಡಲಿ, ಆಮೇಲೆ ಇದರ ಬಗ್ಗೆ ಮಾತನಾಡಿದರೆ ಚೆನ್ನಾಗಿರುತ್ತೇನೋ.

ಶ್ರೀ ಜಗದೀಶ್ ಶೆಟ್ಟರ್:- ರುಚಿ ನೋಡುವುದಿರಲಿ, ಮೊದಲು ಹಂದಿಗಳನ್ನು ಹೊರಗೆ ಹಾಕುವಂಥ ಕೆಲಸವನ್ನು ಮಾಡಿ.

ಶ್ರೀ ಚಂದ್ರಕಾಂತ್ ಬೆಲ್ಲದ್:- ಮಾನ್ಯ ಅಧ್ಯಕ್ಷರೇ, ಈ ಹಂದಿಗಳ ಬಗ್ಗೆ ಕೊಟೇಷನ್ ಹೇಳುತ್ತಾರೆ. 'ನಿಂದಕರಿರಬೇಕು ಜಗದೊಳು, ನಿಂದಕರಿರಬೇಕು ಹಂದಿ ಇದ್ದಾಂಗೆ' ಎಂದು. ಈಗ ನಿಂದಕರಿಗೂ ಮತ್ತು ಹಂದಿಗೂ ಎಷ್ಟು ಸಂಬಂಧವೋ ಗೊತ್ತಾಗಲಿಲ್ಲ.

ಶ್ರೀ ಎಂ.ಪಿ. ಪ್ರಕಾಶ್:- ಕೂರ್ಮಾವತಾರದ ಸಂಬಂಧ.

ವಿಷಯ:- **1996-97**ನೇ ಸಾಲಿನಲ್ಲಿ ಮಂಜೂರಾದ ಪ್ರೌಢಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳು.

334(2321) ಶ್ರೀ ಯು.ಆರ್. ಸಭಾಪತಿ (ಉಡುಪಿ):- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳ ಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1996-97ನೇ ಸಾಲಿನಲ್ಲಿ ಮಂಜೂರಾಗಿರುವ ಪ್ರೌಢ ಮತ್ತು ಪದವಿ ಪೂರ್ವ ಕಾಲೇಜುಗಳು ಎಷ್ಟು? (ವಿವರ ನೀಡುವುದು)?

ಆ) ಇವುಗಳಲ್ಲಿ ಖಾಸಗಿ ಶಾಲೆಗಳು ಎಷ್ಟು? ಹಾಗೂ ಸರ್ಕಾರಿ ಪ್ರೌಢಶಾಲೆಗಳು ಎಷ್ಟು?

ಇ) ಮಂಜೂರಾತಿ ನೀಡುವಾಗ ಬೇಕಾದ ಮೂಲಭೂತ ಸೌಕರ್ಯಗಳ ಪರಿಶೀಲನೆ ಮಾಡಿ ಮಂಜೂರಾತಿ ಮಾಡಲಾಗುವುದೇ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):-

ಅ)	ಪ್ರೌಢಶಾಲೆಗಳು	–	484
	ಪದವಿ ಪೂರ್ವ ಕಾಲೇಜುಗಳು	–	109
ಆ)	ಖಾಸಗಿ ಪ್ರೌಢಶಾಲೆ	–	209
	ಸರ್ಕಾರಿ ಪ್ರೌಢಶಾಲೆ	–	225
	ಖಾಸಗಿ ಪದವಿ ಪೂರ್ವ ಕಾಲೇಜುಗಳು	–	59
	ಸರ್ಕಾರಿ ಪದವಿ ಪೂರ್ವ ಕಾಲೇಜುಗಳು	–	50

ಇ) ಹೌದು.

ಶ್ರೀ ಯು.ಆರ್. ಸಭಾಪತಿ:- 1996-97ನೇ ಸಾಲಿನಲ್ಲಿ 484 ಪ್ರೌಢಶಾಲೆಗಳನ್ನು ಮತ್ತು 180 ಪದವಿಪೂರ್ವ ಕಾಲೇಜುಗಳನ್ನು ತೆರೆಯಲು ಮಂಜೂರಾತಿ ನೀಡಲಾಗಿದೆ ಎಂದು ತಿಳಿಸಿದ್ದೀರಿ. ಇದರಲ್ಲಿ ಎಷ್ಟು ಪ್ರೌಢ ಶಾಲೆಗಳು ಮತ್ತು ಪದವಿಪೂರ್ವ ಕಾಲೇಜುಗಳು ಪ್ರಾರಂಭವಾಗಿವೆ ಎಂಬ ಬಗ್ಗೆ ನಮಗೆ ಸ್ವಲ್ಪ ಮಾಹಿತಿಯನ್ನು ಒದಗಿಸಬೇಕು. ಎರಡನೆಯದಾಗಿ ತಾವು ಉತ್ತರದಲ್ಲಿ ಮಂಜೂರಾತಿ ನೀಡುವಾಗ ಬೇಕಾಗುವ ಮೂಲಭೂತ ಸೌಲಭ್ಯಗಳ ಬಗ್ಗೆ ಪರಿಶೀಲನೆ ಮಾಡಿಯಾದ ಮೇಲೆ ಮಂಜೂರಾತಿಯನ್ನು ಮಾಡಿದ್ದೇವೆ ಎನ್ನುವ ಉತ್ತರವನ್ನು ಕೊಟ್ಟಿದ್ದೀರಿ. ಇದು ಖಂಡಿತವಾಗಿಯೂ ಸರಿಯಾದ ಉತ್ತರವಲ್ಲ. ಏಕೆಂದರೆ ಅನೇಕ ಪ್ರೌಢ ಶಾಲೆಗಳಿಗೆ ಮೂಲಭೂತ ಸೌಲಭ್ಯಗಳೇ ಇಲ್ಲದೇ ಮಂಜೂರಾತಿಯನ್ನು ಪಡೆದುಕೊಂಡಿರುವ ಉದಾಹರಣೆಗಳು ಇವೆ. ಇದರ ಬಗ್ಗೆ ತಮಗೇನಾದರೂ ಗಮನಕ್ಕೆ ಬಂದಿದೆಯೇ ಎನ್ನುವುದು ನನ್ನ ಎರಡನೆಯ ಪ್ರಶ್ನೆಯಾಗಿದೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ:- ಮಾನ್ಯ ಅಧ್ಯಕ್ಷರೇ, ಸರ್ಕಾರಿ ಪ್ರೌಢ ಶಾಲೆಯನ್ನು ಎಲ್ಲಾ ಕ್ಷೇತ್ರಗಳಿಗೂ ಒದಗಿಸಬೇಕು ಎಂದು ಈ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಂಡಿದೆ. ಪಕ್ಷಾತೀತವಾಗಿ ಎಲ್ಲಾ ಕ್ಷೇತ್ರಗಳಲ್ಲೂ ಪ್ರೌಢಶಾಲೆಗಳ ಅವಶ್ಯಕತೆ ಇದೆ ಎಂದು ನಾವು ತಿಳಿದುಕೊಂಡಿದ್ದೇವೆ ಮತ್ತು ಅಧಿಕಾರಿಗಳಿಂದಲೂ ಕೂಡ ವರದಿಯನ್ನು ಇದರ ಬಗ್ಗೆ ತರಿಸಿಕೊಟ್ಟಿರುವಂಥದ್ದು ಇದೆ. ಒಂದು ವೇಳೆ ಅವಶ್ಯಕತೆಯೇ ಇಲ್ಲದೇ, ಮೂಲಭೂತ ಸೌಕರ್ಯವೇ ಇಲ್ಲದೇ ಕೊಟ್ಟಿರತಕ್ಕಂಥದ್ದರ ಬಗ್ಗೆ ನಮಗೆ ತಿಳಿಸಿದರೆ ಅದರ ಬಗ್ಗೆ ನಾನು ಯೋಜನೆಯನ್ನು ಮಾಡುತ್ತೇನೆ. ಪದವಿಪೂರ್ವ ಕಾಲೇಜುಗಳನ್ನೂ ಕೂಡ ಎಲ್ಲಾ ಜಿಲ್ಲೆಗಳಿಗೂ ಎರಡೆರಡು ಕೊಡಬೇಕೆಂದು ಯೋಜನೆ ಮಾಡಿ ಕೆಲವು ಕಡೆ ಎರಡು ಕೊಟ್ಟು ಹೆಚ್ಚು ಅವಶ್ಯಕತೆ ಇರುವ ಕಡೆ ಮೂರನ್ನೂ ಕೊಟ್ಟಿದ್ದೇವೆ. ಪಕ್ಷಾತೀತವಾಗಿ ಅವಶ್ಯಕತೆಯನ್ನು ನೋಡಿಕೊಂಡೇ ಕೊಟ್ಟಿದ್ದೇವೆಯೇ ಹೊರತು ಬೇರೆ ಯಾವುದೇ ಅಭಿಪ್ರಾಯದಿಂದಲೂ ಕೊಟ್ಟಿರುವುದಿಲ್ಲ. ಕೆಲವು ಕಡೆ ಮಂಜೂರು ಆಗುವಂಥದ್ದು ನಿಧಾನವಾಯಿತು. ನಾನು ಇದರ ಬಗ್ಗೆ ಫೈನಾನ್ಸ್‌ನಿಂದ ಅಪ್ರೂವಲ್ ತರಿಸಿಕೊಂಡೆ; ಅದರ ಜೊತೆಯಲ್ಲೇ ರಿಪೋರ್ಟ್‌ಗಳನ್ನು ತರಿಸಿಕೊಂಡೆ ಮತ್ತು ಶಾಸಕರೂ ಕೂಡ ಕೆಲವು ಅಭಿಪ್ರಾಯಗಳನ್ನು ಇದರ ಬಗ್ಗೆ ಕೊಟ್ಟಿದ್ದಾರೆ. ಇದಲ್ಲದೇ ಇಲಾಖೆಯ ವರದಿಯನ್ನೂ ಕೂಡ ತರಿಸಿಕೊಂಡು ನೋಡಿದ್ದೇನೆ. ಸ್ವಲ್ಪ ನಿಧಾನವಾಗಿದೆ. ಆದರೆ ಈಗ ಎಲ್ಲಾ ಕಡೆಯಲ್ಲೂ ಪ್ರಾರಂಭವಾಗಿದೆ. ಒಂದೆರಡು ಕಡೆಯೇನೋ ಪ್ರಾರಂಭವಾಗಿಲ್ಲ. ಅದನ್ನು ಕೂಡಲೇ ಪ್ರಾರಂಭ ಮಾಡುವುದಕ್ಕೆ ವ್ಯವಸ್ಥೆಯನ್ನು ಮಾಡುತ್ತೇನೆ.

ಶ್ರೀ ಯು.ಆರ್. ಸಭಾಪತಿ:- ಈಗಾಗಲೇ ಮಂಜೂರಾತಿ ಕೊಟ್ಟಿರುವ ಪ್ರೌಢಶಾಲೆಗಳಿಗೆ ತಾವು ಮುಖ್ಯೋಪಾಧ್ಯಾಯರನ್ನು ನಿಯೋಜನೆ ಮಾಡಿದ್ದಿರೋ? ಏಕೆಂದರೆ ಅನೇಕ ಶಾಲೆಗಳಿಗೆ ನಿಯೋಜನೆ ಮಾಡದೇ ಪ್ರಾಥಮಿಕ ಮತ್ತು ಸೆಕೆಂಡರಿಶಾಲೆಯ ಮುಖ್ಯೋಪಾಧ್ಯಾಯರೇ ಇದರ ಉಸ್ತುವಾರಿಯನ್ನು ನೋಡುವುದಾದರೆ ಇದರಲ್ಲಿ ಉದ್ದೇಶ ಸಾಧನೆಯಾಗುವುದಿಲ್ಲವೆಂಬುದು ನನ್ನ ಅಭಿಪ್ರಾಯವಾಗಿದೆ. ಎಷ್ಟು ಶಾಲೆಗಳಿಗೆ ಮುಖ್ಯೋಪಾಧ್ಯಾಯರನ್ನು ನಿಯೋಜನೆ ಮಾಡಿದ್ದೀರೋ? ಒಂದು ವೇಳೆ ಮಾಡದೇ ಇದ್ದರೆ ಯಾವಾಗ ನಿಯೋಜನೆ ಮಾಡುತ್ತೀರಿ?

ಶ್ರೀ ಹೆಚ್.ಜಿ. ಗೋವಿಂದೇಗೌಡ:- ಹೊಸದಾಗಿ ಏನು ಪ್ರೌಢ ಶಾಲೆಗಳು ಪ್ರಾರಂಭವಾಗಿದೆ ಆಲ್ಲಿಯ ಹತ್ತಿರದಲ್ಲಿರುವ ಶಾಲೆಯ ಉಪಾಧ್ಯಾಯರನ್ನೇ ನಿಯೋಜನೆ ಮಾಡಿ ಅಡ್ಮಿಷನ್ಸ್ ಮಾಡಿಕೊಳ್ಳುವುದಕ್ಕೆ ಯಾವುದೇ ತೊಂದರೆ ಆಗದಿರಲಿ ಎನ್ನುವ ಉದ್ದೇಶದಿಂದ ತಾತ್ಕಾಲಿಕವಾದಂಥ ವ್ಯವಸ್ಥೆಯನ್ನು ಮಾಡಿದ್ದೇವೆ. ಈಗ 2500 ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವ ಕೆಲಸ ಇನ್ನೂ ಒಂದು ಅಥವಾ ಒಂದೂವರೆ ತಿಂಗಳಿನಲ್ಲಿ ಆಗುತ್ತದೆ. ಆಮೇಲೆ 864 ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ ವ್ಯವಸ್ಥೆಯಾಗಿದೆ. ಇದೂ ಕೂಡ ಒಂದು ಅಥವಾ ಒಂದೂವರೆ ತಿಂಗಳಿನಲ್ಲಿ ಆಗುತ್ತದೆ. ಈ ಎಲ್ಲಾ ಕಾರ್ಯಕ್ರಮಗಳು ಆದಮೇಲೆ ಆದಷ್ಟು ಜಾಗ್ರತೆಯಾಗಿ ಪದವಿಪೂರ್ವ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಹೇಳಿಕೊಡತಕ್ಕಂಥ ಉಪಾನ್ಯಾಸಕರಗಳು ಮತ್ತು ಪ್ರೌಢಶಾಲೆಗಳಲ್ಲಿ ಪಾಠ ಹೇಳಿಕೊಡತಕ್ಕಂಥ ಉಪಾಧ್ಯಾಯರುಗಳನ್ನು ನೇಮಕಮಾಡಿಕೊಳ್ಳುವ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಡಿ.ಆರ್. ಪಾಟೀಲ್:- ಈ ವರ್ಷ ಪ್ರಾರಂಭಿಸಿದ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಉರ್ದು ಪ್ರೌಢಶಾಲೆಗಳು ಎಷ್ಟು? ಮುಸ್ಲಿಂ ಜನಾಂಗದ ಬೇಡಿಕೆಗನುಗುಣವಾಗಿ ಇನ್ನಷ್ಟು ಹೆಚ್ಚಿನ ಉರ್ದು ಪ್ರೌಢಶಾಲೆಗಳನ್ನು ಇದೇ ಶೈಕ್ಷಣಿಕ ವರ್ಷದಲ್ಲಿ ಪ್ರಾರಂಭ ಮಾಡಲು ಸರ್ಕಾರ ಕಾರ್ಯಕ್ರಮ ಹಾಕಿಕೊಂಡು ಪ್ರಾರಂಭಿಸುವರೆ?

ಶ್ರೀ ಹೆಚ್.ಜಿ. ಗೋವಿಂದೇಗೌಡ:- ಈ ವರ್ಷ 5 ಉರ್ದು ಪ್ರೌಢಶಾಲೆಗಳನ್ನು ಕೊಟ್ಟಿದ್ದೇವೆ, ಆದರೆ ಇನ್ನೂ ಆವಶ್ಯಕತೆ ಇದೆ. ಪರಿಶೀಲನೆ ಮಾಡಿಯಾದ ನಂತರ ಕೊಡಲೇಬೇಕು ಎನ್ನುವ ಅಭಿಪ್ರಾಯವೂ ಕೂಡ ಇದೆ. ಈಗಾಗಲೇ ನಾನು ಇನ್ನೂ 5 ಪ್ರೌಢಶಾಲೆಗಳನ್ನು ಕೊಡಲಿಕ್ಕೆ ಹಣಕಾಸು ಇಲಾಖೆಯವರಿಗೆ ಕೇಳಿದ್ದೇನೆ. ಹಣಕಾಸು ಇಲಾಖೆಯವರಿಂದ ಅನುಮತಿ ದೊರೆತರೆ ಖಂಡಿತ ಮಾಡಿಕೊಡುತ್ತೇನೆ.

ಡಾ॥ ಎಂ.ಪಿ. ಕರ್ಕಿ:- ಮಾನ್ಯ ಅಧ್ಯಕ್ಷರೇ, ಇಲ್ಲಿಯತನಕ ಶಾಲೆಗಳನ್ನು ಕೊಡಬೇಕಾದರೆ ಸ್ಕೂಲ್ ಮ್ಯಾಪಿಂಗ್ ಮಾಡಿಕೊಡುತ್ತಿದ್ದರು. ಅದು ಪ್ರೌಢಶಾಲೆಗಳೇ ಆಗಿರಬಹುದು, ಪ್ರಾಥಮಿಕ ಶಾಲೆಗಳೇ ಆಗಿರಬಹುದು. ಆದರೆ ಈ ಬಾರಿ ಸ್ವಲ್ಪ ಡೀವಿಯೇಷನ್ ಮಾಡಿ ಪಕ್ಷಾತೀತವಾಗಿ ಒಂದು ನಿರ್ಣಯ ತೆಗೆದುಕೊಂಡು ಶಾಲೆಗಳನ್ನು ಒದಗಿಸಿದ್ದಾರೆ. ಆದರೆ ಕೆಲವು ಶಾಲೆಗಳು ಬೇಕಾಗಿಯೇ ಇರುವುದಿಲ್ಲ. ಅನೇಕ ಪ್ರದೇಶಗಳಲ್ಲಿ ಆವಶ್ಯಕತೆಯೇ ಇರುವುದಿಲ್ಲ. ಅಲ್ಲಿ ಶಾಲೆಗಳನ್ನು ಮಾಡಿದರೆ ಈಗಾಗಲೇ ಅಲ್ಲಿ ಇರತಕ್ಕಂಥ ಶಾಲೆಗಳಿಗೆ ತೊಂದರೆಗಳು ಬರುತ್ತಿವೆ. ನಾನು ಈ ವಿಷಯವನ್ನು ಸಚಿವರ ಗಮನಕ್ಕೆ ತಂದಿದ್ದೇನೆ. ಆ ಶಾಲೆಯನ್ನು ನಿಲ್ಲಿಸುತ್ತೇವೆ ಎಂದು ಸಚಿವರು ಹೇಳಬೇಕು. ಯೋಜನೆ ಮಾಡಬೇಕು ಎಂದೇನೂ ಹೇಳಬೇಕಾಗಿಲ್ಲ. ಮತ್ತೊಂದು ಶಾಲೆಗೆ ಇದರಿಂದ ತೊಂದರೆಯಾಗಿದೆ. ಆದಕ್ಕಾಗಿ ಹೊಸದಾಗಿ ಕೊಟ್ಟಿರತಕ್ಕಂಥ ಶಾಲೆಯನ್ನು ನಿಲ್ಲಿಸುತ್ತಾರೋ ಅಥವಾ ರದ್ದುಪಡಿಸುತ್ತಾರೋ ಎನ್ನುವ ಬಗ್ಗೆ ಖಚಿತವಾದ ಉತ್ತರಬೇಕು.

11.40 ಎ.ಎಂ.

ಶ್ರೀ ಹೆಚ್.ಜಿ ಗೋವಿಂದೇಗೌಡ:- ಮಾನ್ಯ ಅಧ್ಯಕ್ಷರೇ, ನನ್ನ ಸ್ನೇಹಿತರು ಏನು ಅರ್ಜಿಕೊಟ್ಟಿದ್ದಾರೆ ಅದರ ಬಗ್ಗೆ ನಾನು ಅಧಿಕಾರಿಗಳಿಗೆ ಸ್ಥಳ ಪರಿಶೀಲನೆ ಮಾಡಿ ಪ್ರೈವೇಟ್ ಹೈಸ್ಕೂಲ್‌ಗಳು ಎಷ್ಟು ದೂರದಲ್ಲಿ ಇವೆ, ಅಥವಾ ಸರ್ಕಾರಿ ಹೈಸ್ಕೂಲ್‌ಗಳು ಎಲ್ಲೆಲ್ಲಿ ಇದೆ, ಇದರ ಅವಶ್ಯಕತೆ ಇಲ್ಲವೇ ಎಂದು ತಿಳಿದುಕೊಂಡು ರಿಪೋರ್ಟ್ ಕೊಡಿ ಎಂದು ಕೇಳಿದ್ದೇನೆ. ನನ್ನ ಖಚಿತವಾದಂತಹ ಅಭಿಪ್ರಾಯವನ್ನು ಅಧಿಕಾರಿಗಳಿಂದ ವರದಿ ಬರದೇ ಹೇಳಿದರೆ ಅದು ಸರಿಯಾಗುವುದಿಲ್ಲ ಎಂದು ನನ್ನ ಭಾವನೆ. ಖಚಿತವಾದ ಅಭಿಪ್ರಾಯ ಬಂದ ತಕ್ಷಣ ನಾನು ನನ್ನ ಸ್ನೇಹಿತರಿಗೆ ಹೇಳುತ್ತೇನೆ.

ಡಾ॥ ಎಂ.ಪಿ. ಕರ್ಕಿ:- ನಾನು ಕೇಳುವುದೇನೆಂದರೆ ಅಲ್ಲಿ ಶಾಲೆ ಅವಶ್ಯಕತೆ ಇಲ್ಲ ಎನಿಸಿದರೆ ಖಚಿತವಾಗಿ ರದ್ದು ಮಾಡುತ್ತೀರೋ? ಅಲ್ಲಿ ಶಾಲೆ ಮಾಡಿದರೆ ಮತ್ತೊಂದು ಶಾಲೆ ಬಂದ್ ಆಗುತ್ತದೆ ಎನ್ನುವ ಅಭಿಪ್ರಾಯ ಸರ್ಕಾರಕ್ಕೆ, ಮಂತ್ರಿಗಳಿಗೆ ಬಂದರೆ ಖಚಿತವಾಗಿ ರದ್ದು ಮಾಡುತ್ತೀರೋ?

ಶ್ರೀ ಹೆಚ್.ಜಿ. ಗೋವಿಂದೇಗೌಡ:- ಮಾನ್ಯ ಅಧ್ಯಕ್ಷರೇ, ಅವಶ್ಯಕತೆ ಇಲ್ಲದೆ ಇರುವ ಕಡೆ ಕೊಡುವಷ್ಟು ಹಣ ನಮ್ಮಲ್ಲಿ ಸಿಕ್ಕಾಪಟ್ಟೆ ಏನೂ ಇಲ್ಲ. ಈ ರಾಜ್ಯದಲ್ಲಿ ಅವಶ್ಯಕತೆ ಇರುವ ಕಡೆ ಕೊಡುವುದಕ್ಕೆ ನಮಗೆ ಆಗುತ್ತಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ಅಗತ್ಯ ಇದೆ ಎಂದು ನಾವು ಶಾಸಕರು ಕೇಳಿದಾಗ ನೀವು ಅಲ್ಲಿಗೆ ಕೊಟ್ಟು ಶಾಲೆಯನ್ನು ಮಂಜೂರು ಮಾಡಿದ ಮೇಲೆ ಆ ಶಾಲೆ ಪಕ್ಕದಲ್ಲೇ ಇರುವಂತಹ ಶಾಲೆ ಮುಚ್ಚಿ, ಅಲ್ಲಿರುವ ವಿದ್ಯಾರ್ಥಿಗಳು ಇಲ್ಲಿಗೆ ಬಂದು, ಇರುವ ಶಾಲೆಯನ್ನು ಮುಚ್ಚುವಂತಹ ಪರಿಸ್ಥಿತಿ ಇದೆ. ಅಂತಹ ಒಂದೆರಡು ಉದಾಹರಣೆಗಳನ್ನು ನಿಮಗೆ ಕೊಟ್ಟಿದ್ದಾರೆ. ಅದು ನಿಮಗೆ ಹಾಗೂ ಸರ್ಕಾರಕ್ಕೆ ಮನವರಿಕೆಯಾದರೆ ತಕ್ಷಣ ಆ ಶಾಲೆಗಳನ್ನು ರದ್ದು ಮಾಡುತ್ತೀರಾ? ಅಷ್ಟೇ ಅವರು ಕೇಳುತ್ತಿರುವುದು.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್:- ಮಾನ್ಯ ಅಧ್ಯಕ್ಷರೇ, ಹೈಗೂರಿನಲ್ಲಿ ಜೂನಿಯರ್ ಕಾಲೇಜ್ ಬೇಕಾಗಿರಲಿಲ್ಲ ಎಂದು ಕಳೆದ ಸಾರಿ ನಾನು ಪ್ರಸ್ತಾಪ ಮಾಡಿದ್ದೆ. ತರಾತುರಿಯಲ್ಲಿ ಯಾವುದೋ ಕಾರಣದಿಂದ ಶಿಫಾರಸ್ಸಿನ ಮೇಲೆ ಕೊಟ್ಟಿದ್ದಾರೆ. ಇವತ್ತು ಅಲ್ಲಿ ಆರು ಜನ ಮಕ್ಕಳು ಮಾತ್ರ ಇದ್ದಾರೆ. ಬೇಕಾದ ಕಡೆ ಶಾಲೆ ಕೊಟ್ಟಿಲ್ಲ. ಯಾವುದೋ ಶಿಫಾರಸ್ಸಿನಿಂದ ಮಕ್ಕಳು ಸಿಗದಂತಹ ಸ್ಥಳಕ್ಕೆ ಕೊಟ್ಟಿದ್ದಾರೆ. ಅದನ್ನು ಏನು ಮಾಡುತ್ತೀರಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೇ, ಇವರಿಗೆ ಎಲ್ಲೆಲ್ಲಿ ಬೇಡವಾಗಿದೆ, ಅವುಗಳನ್ನು ಹೈದರಾಬಾದ್ ಕರ್ನಾಟಕಕ್ಕೆ ತಾವು ಕೊಡಿ. ಎಲ್ಲಿ ಅವಶ್ಯಕತೆ ಇದೆ ಅಲ್ಲಿ ಕೊಡಿ. ತಾವು ಅಂತಹವುಗಳನ್ನು ಪರಿಶೀಲಿಸಿ.

ಶ್ರೀ ಹೆಚ್.ಜಿ. ಗೋವಿಂದೇಗೌಡ:- ಮಾನ್ಯ ಅಧ್ಯಕ್ಷರೇ, ಹೈಗೂರಿನ ವಿಚಾರದ ಬಗ್ಗೆ ಮಾನ್ಯ ನಮ್ಮ ಸ್ನೇಹಿತರು ಏನು ಹೇಳಿದರು ಅದರ ಬಗ್ಗೆ ವಿಚಾರಿಸುತ್ತೇನೆ. ಮಾನ್ಯ ಯಡಿಯೂರಪ್ಪನವರು ಹೇಳಿದ್ದಾರೆ ಹಾಗೂ ಇತರ ಸ್ನೇಹಿತರು ಹೇಳಿದ್ದಾರೆ 4–5 ಮಕ್ಕಳು ಇರುವಂತಹ ಪರಿಸ್ಥಿತಿ ಬಂದರೆ ಅಂತಹ ಶಾಲೆ ಅಥವಾ ಕಾಲೇಜುಗಳನ್ನು ನಡೆಸುವುದಕ್ಕೆ ವಿರೋಧವಾಗಿದ್ದೇವೆ. ಅದು ಸರಿಯಲ್ಲ.

ವಿಷಯ:- ಗ್ರಾಮೀಣ ಗುಂಪು ಜೀವವಿಮಾ ಯೋಜನೆ.

337(2193) **ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು):-** ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೇಂದ್ರ ಪುರಸ್ಕೃತ ಗ್ರಾಮೀಣ ಗುಂಪು ಜೀವವಿಮಾ ಯೋಜನೆಯ ವಿವರಗಳೇನು?

ಆ) 1995–96ನೇ ಸಾಲಿಗೆ ಧಾರವಾಡ ಜಿಲ್ಲೆಗೆ ಈ ಯೋಜನೆಯ ಅನುಷ್ಠಾನಕ್ಕೆ ಬಿಡುಗಡೆಯಾದ ಹಣವೆಷ್ಟು? ಖರ್ಚಾದ ಹಣವೆಷ್ಟು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-

ಅ) ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಆ) 1995–96ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಗೆ ರೂ. 4,74,150–00ಗಳನ್ನು ದಿನಾಂಕ: 27–2–96ರಂದು ಬಿಡುಗಡೆ ಮಾಡಲಾಯಿತು. 1995–96ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಯಲ್ಲಿ ಹಣ ಖರ್ಚು ಮಾಡಿರುವುದಿಲ್ಲ.

ಅನುಬಂಧ–1

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 2193ರ(ಅ)ಗೆ ಉತ್ತರ:-

ಭಾರತ ಸರ್ಕಾರದ ಆದೇಶದ ಮೇರೆಗೆ ಭಾರತೀಯ ಜೀವವಿಮೆ ನಿಗಮವು ಗ್ರಾಮೀಣ ಜನರ ಸಾಮಾಜಿಕ ಭದ್ರತೆಗಾಗಿ ಗ್ರಾಮೀಣ ಗುಂಪು ಜೀವವಿಮಾ ಯೋಜನೆಯನ್ನು ದಿನಾಂಕ: 15–8–95 ರಿಂದ ಪ್ರಾರಂಭಿಸಿದೆ. ರಾಜ್ಯ ಸರ್ಕಾರವು ಈ ಯೋಜನೆಯನ್ನು ಗ್ರಾಮೀಣ ಪ್ರದೇಶಗಳಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಮುಖಾಂತರ ಅನುಷ್ಠಾನಗೊಳಿಸುತ್ತಿದೆ. ಈ ಯೋಜನೆ ಅಡಿಯಲ್ಲಿ ವಿಮೆ ಮಾಡಿಸಿದ ಜನರು 60 ವರ್ಷಗಳಿಗೆ ಒಳಪಟ್ಟಿದ್ದಲ್ಲಿ ಅವರು ರೂ. 5,000–00ಗಳನ್ನು ಪಡೆಯಲು ಅರ್ಹರಾಗಿರುತ್ತಾರೆ. ಈ ಯೋಜನೆಯ ಮುಖ್ಯಾಂಶಗಳು ಈ ಕೆಳಕಂಡಂತಿವೆ:-

ಅ) ಈ ಯೋಜನೆಗೆ ಸೇರಲು (ಕನಿಷ್ಟ) 20 ವರ್ಷ ಮತ್ತು ಗರಿಷ್ಟ 50 ವರ್ಷ.

ಆ) 60 ವರ್ಷದವರೆಗಿನ ಸಾವನ್ನು ಈ ಯೋಜನೆಯು ಒಳಪಟ್ಟಿರುತ್ತದೆ.